# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** : **288**

**ಸದಸ್ಯರ ಹೆಸರು** : **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.**
**(ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ** : **11-12-2024**

**ಉತ್ತರಿಸಬೇಕಾದ ಸಚಿವರು** : **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ದೇಶಿ ಗೋ ತಳಿಗಳ ಸಂರಕ್ಷಣೆ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳೇನು ಹಾಗೂ ಪ್ರಸ್ತುತ ರಾಜ್ಯದಲ್ಲಿ ಎಷ್ಟು ದೇಶಿ ಗೋ ತಳಿಗಳಿವೆ ಮತ್ತು ಪ್ರತಿಯೊಂದು ದೇಶಿ ಗೋ ತಳಿಯಡಿ ಇರುವ ಗೋವುಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ದೇಶಿ ಗೋ ತಳಿಗಳ ಸಂರಕ್ಷಣೆ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>ರಾಜ್ಯದಲ್ಲಿ 9 ದೇಶಿ ಗೋ ತಳಿಗಳು ಇರುತ್ತವೆ. ಪ್ರತಿಯೊಂದು ದೇಶಿ ಗೋ ತಳಿಯಡಿ ಇರುವ ಗೋವುಗಳ ಸಂಖ್ಯೆಯ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಆ) | ದೇಶಿ ಗೋ ತಳಿಗಳ ಮಹತ್ವ ಹಾಗೂ ವಿಶೇಷತೆ ಸಾರಲು ಇಲಾಖೆ ಕೈಗೊಂಡಿರುವ ಕ್ರಮಗಳೇನು; | ದೇಶಿ ಗೋ ತಳಿಗಳ ಮಹತ್ವ ಹಾಗೂ ವಿಶೇಷತೆ ಸಾರಲು ಇಲಾಖೆ ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |
| ಇ) | ಕಳೆದ 3 ವರ್ಷಗಳಲ್ಲಿ ಸದರಿ ದೇಶಿ ಗೋ ತಳಿಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸರ್ಕಾರ ವಿನಿಯೋಗಿಸಿರುವ ಅನುದಾನದ ವಿವರಗಳೇನು ಹಾಗೂ ಸದರಿ ಅನುದಾನದ ಮೂಲಕ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು ಯಾವುವು? | ಕಳೆದ ಮೂರು ವರ್ಷಗಳಲ್ಲಿ ಸದರಿ ದೇಶೀಯ ಗೋ ತಳಿ ಸಂವರ್ಧನಾ ಕೇಂದ್ರಗಳಿಗೆ ವಿನಿಯೋಗಿಸಿರುವ ಅನುದಾನದ ವಿವರಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ. |

**ಇ- ಪಸಂಮೀ 300 ಸಲೆವಿ 2024**

(ಕೆ. ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

## ಅನುಬಂಧ-1

ರಾಜ್ಯ ದೇಶೀಯ ಗೋ ತಳಿಗಳ ಸಂರಕ್ಷಣೆ ಅಭಿವೃದ್ಧಿಗೆ ಸರ್ಕಾರದಿಂದ ದೇಶಿ ಗೋ ತಳಿ ಸಂವರ್ಧನಾ ಕೇಂದ್ರಗಳನ್ನು ನಿರ್ವಹಣೆ ಮಾಡುತ್ತಿದ್ದು , ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳು ಹಾಗೂ ಯೋಜನೆಗಳ ವಿವರ.

| ಕ್ರ. ಸಂ. | ಜಿಲ್ಲೆ | ತಳಿ | ಕ್ಷೇತ್ರದ ಹೆಸರು | ಕೈಗೊಂಡಿರುವ ಕಾರ್ಯಕ್ರಮಗಳು ಹಾಗೂ ಯೋಜನೆಗಳು |
|---|---|---|---|---|
| 1 | ಚಿಕ್ಕಮಗಳೂರು | ಅಮೃತ್ ಮಹಲ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಅಜ್ಜಂಪುರ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿಳುವಾಲ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬೀರೂರು.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಾಸೂರು.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಲಿಂಗದಹಳ್ಳಿ. | 1. ಅಮೃತ್ ಮಹಲ್‌ನ ಐತಿಹಾಸಿಕ ಜಾನುವಾರು ತಳಿಯನ್ನು ಸಂರಕ್ಷಿಸಿ ಸಂವರ್ಧನೆ ಮಾಡಲಾಗುತ್ತಿದೆ.<br>2.ಅಮೃತ್ ಮಹಲ್ ಜಾನುವಾರು ತಳಿಯ ಶುದ್ಧತೆಯನ್ನು ಕಾಪಾಡಿ ಕೊಳ್ಳಲಾಗುತ್ತಿದೆ.<br>3. ಹರಾಜಿನ ಮೂಲಕ ರೈತರಿಗೆ ಶುದ್ಧ ಅಮೃತ್ ಮಹಲ್ ಹೋರಿ ಕರುಗಳನ್ನು ಒದಗಿಸುವುದು ಮತ್ತು ಘನೀಕೃತ ವೀರ್ಯ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರಗಳಿಗೆ ಉತ್ಕೃಷ್ಟ ಅಮೃತ್ ಮಹಲ್ ಹೋರಿ ಕರುಗಳನ್ನು ಉತ್ಪಾದಿಸಿ ನೀಡಲಾಗುತ್ತಿದೆ.<br>4.ಅಮೃತ ಮಹಲ್ ಕಾವಲುಗಳನ್ನು ಸಂರಕ್ಷಣೆ ಮಾಡಲಾಗುತ್ತಿದೆ.<br>5. ಅಮೃತ ಸಿರಿ ಯೋಜನೆಯಡಿಯಲ್ಲಿ ಆಸಕ್ತ ರೈತರಿಗೆ ಅಮೃತ್ ಮಹಲ್ ಹೆಣ್ಣು ರಾಸುಗಳನ್ನು ವಿತರಿಸಲಾಗುತ್ತಿದೆ. |
| 2 | ಚಿತ್ರದುರ್ಗ | | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಮಗಿರಿ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಚಿಕ್ಕ ಎಮ್ಮಿಗನೂರು.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಕೈನೋಡು. | |
| 3 | ಹಾಸನ | | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಹಬ್ಬನಘಟ್ಟ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿದರೆ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಯಸಂದ್ರ. | |
| 4 | ತುಮಕೂರು | ಹಳ್ಳಿಕಾರ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುಣಿಕೇನಹಳ್ಳಿ ಹಾಗೂ ಹುಲ್ಲೇನಹಳ್ಳಿ | 1. ಹಳ್ಳಿಕಾರ್ ತಳಿ ಸಂವರ್ಧನೆ ಮತ್ತು ಸಂರಕ್ಷಣೆ ಮಾಡಲಾಗುತ್ತಿದೆ.<br>2.ಹರಾಜಿನ ಮೂಲಕ ರೈತರಿಗೆ ಶುದ್ಧ ಹಳ್ಳಿಕಾರ್ ಹೋರಿಕರುಗಳನ್ನು ಮಾರಾಟ ಮಾಡುವುದು.<br>3. ಉತ್ಕೃಷ್ಟ ಹೋರಿ ಕರಗಳನ್ನು ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ.<br>4. ಅಮೃತ ಸಿರಿ ಯೋಜನೆಯಡಿಯಲ್ಲಿ ಆಸಕ್ತ ರೈತರಿಗೆ ಅಮೃತ್ ಮಹಲ್ ಹೆಣ್ಣು ರಾಸುಗಳನ್ನು ವಿತರಿಸಲಾಗುತ್ತಿದೆ. |
| 5 | ಹಾವೇರಿ | ಖಿಲಾರ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಬಂಕಾಪುರ. | 1. ಖಿಲಾರ್ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ.<br>2. ಹರಾಜಿನ ಮೂಲಕ ರೈತರಿಗೆ ಶುದ್ಧ ಖಿಲಾರ್ ತಳಿ ಹೋರಿಕರುಗಳನ್ನು ಮಾರಾಟ ಮಾಡಲಾಗುತ್ತಿದೆ.<br>3. ಮೇವು ಅಭಿವೃದ್ಧಿ ಪಡಿಸಿ ರೈತರಿಗೆ ಮೇವು ಬೆಳೆ ಬೇರುಗಳನ್ನು ನೀಡಲಾಗುತ್ತಿದೆ. ಪಶುಪಾಲನಾ ಚಟುವಟಿಕೆಗಳ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು |

| | | | | |
|---|---|---|---|---|
| | | | | ಆಯೋಜಿಸಲಾಗುತ್ತಿದೆ.<br>4. ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳನ್ನು ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ.<br>5. ಅಮೃತ ಸಿರಿ ಯೋಜನೆಯಡಿಯಲ್ಲಿ ಆಸಕ್ತ ರೈತರಿಗೆ ಅಮೃತ್ ಮಹಲ್ ಹೆಣ್ಣು ರಾಸುಗಳನ್ನು ವಿತರಿಸಲಾಗುತ್ತಿದೆ. |
| 6 | ದಕ್ಷಿಣ ಕನ್ನಡ | ಮಲೆನಾಡುಗಿಡ್ಡ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೊಯ್ಲಾ. | 1.ಮಲೆನಾಡು ಗಿಡ್ಡ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ.<br>2.ಹರಾಜಿನ ಮೂಲಕ ರೈತರಿಗೆ ಶುದ್ಧ ಮಲೆನಾಡು ಗಿಡ್ಡ ತಳಿಯ ಹೋರಿಕರುಗಳನ್ನು ಮಾರಾಟ ಮಾಡಲಾಗುವುದು.<br>3.ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳ ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ.<br>4.ಅಮೃತ ಸಿರಿ ಯೋಜನೆಯಡಿಯಲ್ಲಿ ಆಸಕ್ತ ರೈತರಿಗೆ ಅಮೃತ್ ಮಹಲ್ ಹೆಣ್ಣು ರಾಸುಗಳನ್ನು ವಿತರಿಸಲಾಗುತ್ತಿದೆ. |
| 7 | ಬಳ್ಳಾರಿ | ದೇವಣಿ<br>ಒಂಗೋಲ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುರಿಕುಪ್ಪೆ. | 2021-22ನೇ ಸಾಲಿನಲ್ಲಿ ಗೋ ಸಂಕುಲ ಸಂವೃದ್ಧಿ ಯೋಜನೆ ಅಡಿಯಲ್ಲಿ ಇತರೆ ರಾಜ್ಯಗಳ ದೇಶಿ ತಳಿಗಳಾದ ದೇವಣಿ, ಗಿರ್, ಸಾಹಿವಾಲ್, ಒಂಗೋಲ್ ತಳಿಗಳನ್ನು ರಾಜ್ಯದ ರೈತರಿಗೆ ಪರಿಚಯಿಸಲು ಇಲಾಖಾ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. |
| 8 | ಚಾಮರಾಜನಗರ | ಗಿರ್ | ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ, ಬರಗಿ. | |
| 9 | ಕೊಡಗು | ಸಾಹಿವಾಲ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೂಡಿಗೆ. | |
| 10 | ಧಾರವಾಡ | ಕೃಷ್ಣಾವ್ಯಾಲಿ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ತೇಗೂರು. | 1.ಕೃಷ್ಣಾವ್ಯಾಲಿ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ.<br>2.ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳ ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ.<br>3.ಅಮೃತ ಸಿರಿ ಯೋಜನೆಯಡಿಯಲ್ಲಿ ಆಸಕ್ತ ರೈತರಿಗೆ ಕೃಷ್ಣಾವ್ಯಾಲಿ ತಳಿಯ ಹೆಣ್ಣು ರಾಸುಗಳನ್ನು ವಿತರಿಸಲಾಗುತ್ತಿದೆ. |

ಅನುಬಂಧ-2

## ರಾಜ್ಯದಲ್ಲಿ ಪ್ರಸ್ತುತ ಇರುವ ವಿವಿಧ ದೇಶೀಯ ಗೋ ತಳಿಗಳ ವಿವರ

| ಕ್ರ. ಸಂ. | ರಾಜ್ಯದಲ್ಲಿರುವ ದೇಶೀಯ ಗೋತಳಿಗಳ ಹೆಸರು | ರಾಜ್ಯದಲ್ಲಿರುವ ದೇಶೀಯ ಗೋತಳಿಗಳ ಸಂಖ್ಯೆ (20 ನೇ ಜಾನುವಾರು ಗಣತಿ -2019 ಪ್ರಕಾರ) |
|---|---|---|
| 1 | ಕೃಷ್ಣಾವ್ಯಾಲಿ | 2523 |
| 2 | ಮಲೆನಾಡು ಗಿಡ್ಡ | 631523 |
| 3 | ಗಿರ್ | 8123 |
| 4 | ಓಂಗೋಲ್ | 3967 |
| 5 | ದೇವಣಿ | 43385 |
| 6 | ಖಿಲಾರ್ | 261144 |
| 7 | ಹಳ್ಳಿಕಾರ್ | 480347 |
| 8 | ಸಾಹಿವಾಲ್ | 676 |
| 9 | ಅಮೃತ್ ಮಹಲ್ | 104663 |

ಅನುಬಂಧ -3

ದೇಶಿ ಗೋ ತಳಿಗಳ ಮಹತ್ವ ಹಾಗೂ ವಿಶೇಷತೆ ಸಾರಲು ಇಲಾಖೆ ಕೈಗೊಂಡಿರುವ ಕ್ರಮಗಳ ವಿವರ

| ಕ್ರಮ ಸಂಖ್ಯೆ | ವಿವರ |
|---|---|
| 1 | ದೇಶಿ ಗೋ ತಳಿಗಳ ಸಂಕ್ಷಣೆ ಮತ್ತು ಅಭಿವೃದ್ಧಿಗೆ ಕ್ಷೇತ್ರಗಳನ್ನು (Farms) ನಿರ್ವಹಣೆ ಮಾಡಲಾಗುತ್ತಿದೆ. |
| 2 | ಉತ್ಕೃಷ್ಟ ತಳಿಗುಣಗಳ ಶುದ್ಧ ದೇಶಿ ಗೋ ತಳಿಯ ಹೋರಿಗಳನ್ನು ಇಲಾಖಾ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. |
| 3 | ರಾಜ್ಯದ ದೇಶಿ ಗೋತಳಿ ಜಾನುವಾರುಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಪ್ರತ್ಯೇಕ ಜಾನುವಾರು ಕ್ಷೇತ್ರಗಳ ಸ್ಥಾಪನೆ ಮತ್ತು ನಿರ್ವಹಣೆ. ದೇಶೀ ತಳಿಗಳ ರಾಸುಗಳ ವೀರ್ಯ ಸಂಸ್ಕರಣೆಗೆ ದೇಶಿ ತಳಿಗಳ ಉತ್ಕೃಷ್ಟ ಗಂಡು ಕರುಗಳನ್ನು ಸಂವರ್ಧನಾ ಕ್ಷೇತ್ರಗಳಲ್ಲಿ ಉತ್ಪಾದಿಸಿ ವೀರ್ಯ ಸಂಸ್ಕರಣಾ ಕೇಂದ್ರಗಳಿಗೆ ನೀಡಲಾಗುತ್ತಿದೆ. |
| 4 | ದೇಶಿ ಗೋತಳಿಗಳ ರಾಸುಗಳ ಸಂರಕ್ಷಣೆಗಾಗಿ ಅಗತ್ಯ ಸಂಖ್ಯೆಯ ರಾಸುಗಳನ್ನು ಪೋಷಿಸುವುದರೊಂದಿಗೆ ಸ್ಥಳಿಯವಾಗಿ ರೈತರಿಗೆ ದೇಶೀ ಗೋತಳಿಯ ರಾಸುಗಳ ತಳಿ ಅಭಿವೃದ್ಧಿಪಡಿಸಲು ಅಗತ್ಯವಾದ ಗಂಡುಕರುಗಳು/ ಹೋರಿಗಳನ್ನು ಒದಗಿಸಲಾಗುತ್ತಿದೆ. |
| 5 | ದೇಶಿ ಗೋತಳಿಯ ರಾಸುಗಳ ಸಂರಕ್ಷಣೆಗಾಗಿ ಪಾರಂಪರಿಕವಾಗಿ ಮೀಸಲಿಡಲಾದ ಕಾವಲು ಭೂಮಿಯ ನಿರ್ವಹಣೆ, ಸದರಿ ಕಾವಲುಗಳಲ್ಲಿ ನಿಗದಿತ ತಳಿಯ ರಾಸುಗಳ ಪಾರಂಪರಿಕ ಪದ್ಧತಿಯ ಸಂಗೋಪನೆ, ಕಾವಲು ಭೂಮಿಯನ್ನು ಮೇವಿನ ಬೆಳಗಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. |
| 6 | ರಾಜ್ಯದಲ್ಲಿ ದೇಶಿ ಗೋತಳಿಗಳ ಸಾಕಾಣಿಕೆ , ಸಂವರ್ಧನೆ ಮತ್ತು ನಿರ್ವಹಣೆ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |
| 7 | ದೇಶಿ ಗೋತಳಿ ಸಂರಕ್ಷಣೆ ಮತ್ತು ಸಂವರ್ಧನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡಲಾಗುತ್ತಿದೆ. |
| 8 | ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕೃತಕ ಗರ್ಭಧಾರಣೆ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ದೇಶಿ ಗೋತಳಿಗಳ ಸಂಖ್ಯೆಯನ್ನು ವೃದ್ಧಿಸಲಾಗುತ್ತಿದೆ. |
| 9 | ಪಾರಂಪರಿಕ ಪದ್ಧತಿಯಲ್ಲಿ ನಿರ್ವಹಿಸಲಾಗುವ ದೇಶಿ ಗೋತಳಿಗಳ ವಾರ್ಷಿಕ ಗಣತಿ ಕಾರ್ಯದ ಮೇಲ್ವಿಚಾರಣೆ ಮಾಡಲಾಗುತ್ತಿದೆ. |
| 10 | ವಿವಿಧ ದೇಶಿ ಗೋತಳಿಗಳ ಉತ್ಕೃಷ್ಟ ಹಾಗೂ ಹೆಚ್ಚುವರಿ ಹೋರಿಗಳನ್ನು ಹರಾಜಿನ ಮೂಲಕ ವಿಲೇವಾರಿಯ ಮೇಲ್ವಿಚಾರಣೆ ಮಾಡಲಾಗುತ್ತಿದೆ. |

# ಅನುಬಂಧ - 4

| ಕ್ರ. ಸಂ. | ಕೇಂದ್ರದ ಹೆಸರು | ನಿರ್ವಹಿಸುತ್ತಿರುವ ದೇಶಿ ಗೋ ತಳಿಗಳು | ಕಳೆದ ಮೂರು ವರ್ಷಗಳಲ್ಲಿ ಸದರಿ ದೇಶಿಯ ಗೋ ತಳಿ ಸಂವರ್ಧನಾ ಕೇಂದ್ರಗಳಿಗೆ ವಿನಿಯೋಗಿಸಿದ ಅನುದಾನದ ವಿವರಗಳು (ರೂ. ಲಕ್ಷಗಳಲ್ಲಿ) | | | ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು |
|---|---|---|---|---|---|---|
| | | | 21-22 | 22-23 | 23-24 | |
| 1 | ತಳಿ ಸಂವರ್ಧನಾ ಕೇಂದ್ರ, ತೇಗೂರು, , ಧಾರವಾಡ ಜಿ. | ಕೃಷ್ಣವ್ಯಾಲಿ | 81.14 | 108.97 | 61.43 | 1. ದೇಶೀಯ ಗೋತಳಿಗಳ ಶುದ್ಧತೆಯನ್ನು ಕಾಪಾಡಿ ಕೊಳ್ಳಲಾಗುತ್ತಿದೆ.<br><br>2. ಹರಾಜಿನ ಮೂಲಕ ರೈತರಿಗೆ ಶುದ್ಧ ದೇಶೀಯ ಗೋತಳಿಗಳ ಹೋರಿ ಕರುಗಳನ್ನು ಒದಗಿಸಲಾಗುತ್ತಿದೆ.<br><br>3. ಘನೀಕೃತ ವೀರ್ಯ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರಗಳಿಗೆ ಉತ್ಕೃಷ್ಟವಾದ ದೇಶೀಯ ಗೋತಳಿಗಳ ಹೋರಿ ಕರುಗಳನ್ನು ಉತ್ಪಾದಿಸಿ ನೀಡಲಾಗುತ್ತಿದೆ.<br><br>4. ಅಮೃತ ಸಿರಿ ಯೋಜನೆಯಡಿಯಲ್ಲಿ ಆಸಕ್ತ ರೈತರಿಗೆ ದೇಶಿಯ ಗೋತಳಿಗಳ ಹೆಣ್ಣು ರಾಸುಗಳನ್ನು ವಿತರಿಸಲಾಗುತ್ತಿದೆ.<br><br>5.ಮೇವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ, ರೈತರಿಗೆ ಮೇವು ಬೆಳೆ ಬೇರುಗಳನ್ನುನೀಡಲಾಗುತ್ತಿದೆ.<br><br>6.ಪಶುಸಂಗೋಪನಾ ಚಟುವಟಿಕೆಗಳ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br><br>7. 2021-22ನೇ ಸಾಲಿನಲ್ಲಿ ಗೋ ಸಂಕುಲ ಸಂಮೃದ್ಧಿ ಯೋಜನೆ ಅಡಿಯಲ್ಲಿ ಇತರೆ ರಾಜ್ಯಗಳ ದೇಶಿ ತಳಿಗಳಾದ ದೇವಣಿ, ಗಿರ್, ಸಾಹಿವಾಲ್, ಒಂಗೋಲ್ ತಳಿಗಳನ್ನು ರಾಜ್ಯದ ರೈತರಿಗೆ ಪರಿಚಯಿಸಲು ಇಲಾಖಾ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ.<br><br>8. ದೇಶೀ ಗೋತಳಿಗಳ ಸಂರಕ್ಷಣೆ, ಮತ್ತು ನಿರ್ವಹಣೆಗಾಗಿ ಇಲಾಖೆಯ ಕಾವಲುಗಳನ್ನು ಸಂರಕ್ಷಿಸಲಾಗುತ್ತಿದೆ. |
| 2 | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೊಯ್ಲಾ, ದಕ್ಷಿಣ ಕನ್ನಡ ಜಿ. | ಮಲೆನಾಡು ಗಿಡ್ಡ | 68.62 | 106.80 | 30.14 | |
| 3 | ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ, ಬರಗಿ, , ಚಾಮರಾಜನಗರ ಜಿ. | ಗಿರ್ | 48.00 | 46.00 | 25.52 | |
| 4 | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುರೇಕುಪ್ಪೆ , ಬಳ್ಳಾರಿ ಜಿ. | ಸಾಹಿವಾಲ್, ಒಂಗೋಲ್ | 24.02 | 32.56 | 12.11 | |
| 5 | ಖಿಲಾರ್ ತಳಿ ಗೋವು ಸಂವರ್ಧನಾ ಕೇಂದ್ರ, ಬಂಕಾಪುರ, ಹಾವೇರಿ ಜಿ. | ಖಿಲಾರಿ | 54.00 | 58.71 | 30.50 | |
| 6 | ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ, ಕುಣಿಕೇನಹಳ್ಳಿ, , ತುಮಕೂರು ಜಿ. | ಹಳ್ಳಿಕಾರ್ | 153.90 | 147.89 | 43.83 | |
| 7 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಹುಲ್ಲೇನಹಳ್ಳಿ, ತುರುವೇಕೆರೆ | ಹಳ್ಳಿಕಾರ್ | Nil | 5.38 | 8.59 | |
| 8 | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೂಡಿಗೆ, ಕೊಡಗು ಜಿ. | ಸಾಹಿವಾಲ್, | 75.85 | 57.69 | 18.53 | |
| 9 | ಅಮೃತ್ ಮಹಲ್ ತಳಿ ಸಂವರ್ದನಾ ಕೇಂದ್ರ, ಅಜ್ಜಂಪುರ, ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 14.33 | 70.79 | 32.04 | |
| 10 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬೀರೂರು, ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 54.25 | 52.88 | 29.48 | |
| 11 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಚಿಕ್ಕಎಮ್ಮಿಗನೂರು, ಚಿತ್ರದುರ್ಗ ಜಿ. | ಅಮೃತ್ ಮಹಲ್ | 67.20 | 65.49 | 17.18 | |
| 12 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಲಿಂಗದಹಳ್ಳಿ , ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 56.13 | 56.68 | 14.23 | |
| 13 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿಳುವಾಲ, , ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 14.89 | 36.54 | 18.87 | |
| 14 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಾಸೂರು, ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 15.09 | 34.64 | 15.55 | |
| 15 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿದರೆ, ಹಾಸನ ಜಿ. | ಅಮೃತ್ ಮಹಲ್ | 42.47 | 45.49 | 25.49 | |
| 16 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಯಸಂದ್ರ, ಹಾಸನ ಜಿ. | ಅಮೃತ್ ಮಹಲ್ | 34.88 | 20.00 | 25.98 | |
| 17 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಹಬ್ಬನಘಟ್ಟ, ಹಾಸನ ಜಿ. | ಅಮೃತ್ ಮಹಲ್ | 47.58 | 39.8 | 7.81 | |
| 18 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಕೈನೋಡು, ಚಿತ್ರದುರ್ಗ ಜಿ. | ಅಮೃತ್ ಮಹಲ್ | Nil | 26.50 | 13.01 | |
| 19 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಮಗಿರಿ, ಚಿತ್ರದುರ್ಗ ಜಿ. | ಅಮೃತ್ ಮಹಲ್ | 58.09 | 39.26 | 16.09 | |